ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ** ಅನುವಾದ : **ಮಾತಾ ತ್ಯಾಗಮಯೀ**

ಶಾಶ್ವತ ಪ್ರಶ್ನೆಗಳು

ಭಗವದ್ಗೀತೆ ಹೇಳುವ ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತ್ತು ಜ್ಞಾನಿ — ಈ ನಾಲ್ಕು ಬಗೆಯ ಜನ ಭಗವಂತನನ್ನು ಭಜಿಸುತ್ತಾರೆ. ಈ ನಾಲ್ವರೂ ಉದಾರರೇ. ಆದರೆ ಎಲ್ಲಿಯವರೆಗೆ ಜನರು ಆಸೆಗಳನ್ನು ಪೂರೈಸುವುದಕ್ಕಾಗಿ, ದುಃಖಗಳ ನಾಶಕ್ಕಾಗಿ ಭಗವಂತನ ಮೊರೆ ಹೋಗುತ್ತಾರೋ, ಅಲ್ಲಿಯವರೆಗೆ ಅವನು ಭಜನೆ ಸಾಧನೆಯನ್ನು ಮಾಡುತ್ತಿದ್ದರೂ, ನಿಜವಾದ ಅರ್ಥದಲ್ಲಿ ಆಧ್ಯಾತ್ಮಿಕ ಜೀವನ ಪ್ರಾರಂಭವಾಗಿರುವುದಿಲ್ಲ. ಹೆಚ್ಚಿನ ಜನ ವಿಷಯಭೋಗಗಳಲ್ಲಿ, ಅರ್ಥಕಾಮಗಳನ್ನು ತೃಪ್ತಿಪಡಿಸುವಲ್ಲಿ ಆಸಕ್ತರಾಗಿರುತ್ತಾರೆ. ಆದರೆ ಕೆಲವರು ಅದರಿಂದ ತೃಪ್ತರಾಗುವುದಿಲ್ಲ. ಅವರು ಅವುಗಳಲ್ಲಿ ಅರುಚಿಯನ್ನು ತಾಳಿ, ಬೇರೆ ಗಂಭೀರ ಪ್ರಶ್ನೆಗಳನ್ನು ಕೇಳುತ್ತಾರೆ. ವಿಷಯ ಭೋಗಗಳೇ ಜೀವನದ ಸರ್ವಸ್ವವೆ? ಪರಮ ಸತ್ಯ ಯಾವುದು? ಭಗವಂತ ಇದ್ದಾನೆಯೆ? — ಇತ್ಯಾದಿ. ಇವರು ಜಿಜ್ಞಾಸುಗಳು. ಇದು ಜಿಜ್ಞಾಸೆಯ ಆರಂಭ. ಆಧ್ಯಾತ್ಮಿಕ ಜೀವನದ ಆರಂಭ. ಈ ಶಾಶ್ವತ ಪ್ರಶ್ನೆ ಗಳಿಂದಲೇ ಉಪನಿಷತ್ತುಗಳು ತೆರೆದುಕೊಳ್ಳುತ್ತವೆ.

ಕಠೋಪನಿಷತ್ತಿನಲ್ಲಿ ಬಾಲಕ ನಚಿಕೇತ ಯಮಧರ್ಮನಿಗೆ ಕೇಳಿದ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

‘ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇಽಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ।’ — ‘ಕೆಲವರು ಹೇಳುತ್ತಾರೆ, ಮನುಷ್ಯನು ತೀರಿಕೊಂಡ ಮೇಲೆ ಇರುತ್ತಾನೆ, ಇನ್ನು ಕೆಲವರು ಹೇಳುತ್ತಾರೆ, ಅವನು ತೀರಿಕೊಂಡ ಮೇಲೆ ಇರುವುದಿಲ್ಲ. ಇವೆರೆಡರಲ್ಲಿ ಯಾವುದು ಸತ್ಯ ? ವ್ಯಕ್ತಿ ತೀರಿಕೊಂಡ ಮೇಲೆ ಏನಾಗುತ್ತಾನೆ? ನಾನು ಇದನ್ನು ಅರಿಯಬಯಸುತ್ತೇನೆ.’ ಈ ಪ್ರಶ್ನೆಯನ್ನು ಅನಾದಿ ಕಾಲದಿಂದ ಕೇಳಲಾಗಿದೆ. ಇದನ್ನು ಅನಂತಕಾಲದವರೆಗೆ ಕೇಳುತ್ತಲೂ ಇರುತ್ತಾರೆ. ಮನುಷ್ಯನ ಶಾಶ್ವತವಾಗಿರಬೇಕೆಂಬ ಬಯಕೆ, ಅಮರನಾಗುವ ಆಸೆ ಅವನಿಂದ ಈ ಪ್ರಶ್ನೆಯನ್ನು ಕೇಳುವಂತೆ ಮಾಡುತ್ತದೆ. ಅಮರತ್ವವು ಜೀವನದ ಗುರಿ ಎನ್ನುವು ದಾದರೆ ಅದನ್ನು ದೇವತೆಗಳ ವರದಾನದಿಂದ ಪಡೆಯ ಬಹುದಲ್ಲ ಎಂಬ ಸಂಶಯ ಬರಬಹುದು. ಮರಣಾನಂತರ ಏನು ಎಂದು ಜಿಜ್ಞಾಸೆಗೈದು ಪ್ರಯೋಜನವೇನು? ಜ್ಞಾನದ ಮಹಿಮೆಯ ನ್ನರಿಯದ್ದರಿಂದ ಈ ಸಂಶಯ ಬರುತ್ತದೆ. ಮನುಷ್ಯನ ಸ್ವರೂಪ ವೇನು ಎಂಬುದು ಈ ಪ್ರಶ್ನೆಯ ತಾತ್ಪರ್ಯ. ದೇಹವನ್ನು ಮನುಷ್ಯನ ಸ್ವರೂಪ ಎಂದು ಬಗೆದರೆ ಅದು ನಶ್ವರ. ಮನುಷ್ಯನನ್ನು ಆತ್ಮ ಎನ್ನುವು ದಾದರೆ ಅವನು ಸಾಯುತ್ತಾನೆ ಎನ್ನುವ ಮಾತೇ ತಪ್ಪಾಗುತ್ತದೆ. ಆದ್ದ ರಿಂದ ಆತ್ಮಸ್ವರೂಪವನ್ನು ಅರಿಯುವುದೇ ಅಮರನಾಗುವುದು ಎಂಬು ದರ ಅರ್ಥ.

ಮುಂಡಕ ಉಪನಿಷತ್ತು ಗೃಹಸ್ಥನಾದ ಶೌನಕಋಷಿಯು ಅಂಗಿ ರಸನನ್ನು ಪ್ರಶ್ನಿಸುವುದರೊಂದಿಗೆ ಆರಂಭವಾಗುತ್ತದೆ: **‘ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ’** — ಯಾವುದನ್ನು ಅರಿಯುವುದರಿಂದ ಎಲ್ಲವನ್ನು ಅರಿತಂತಾಗುತ್ತದೆ? ಎಂತಹ ಅದ್ಭುತ ಪ್ರಶ್ನೆ! ಮಾನವನ ನಿರಂತರ ಜ್ಞಾನಪಿಪಾಸೆಯ ಪ್ರತೀಕ ಈ ಪ್ರಶ್ನೆ. ಮನುಷ್ಯ ಜೀವನದ ಏಕಮಾತ್ರ ಗುರಿ ಸುಖ ಎಂದೆನ್ನುವುದು ತಪ್ಪಾಗು ತ್ತದೆ. ಆನಂದ ಮನುಷ್ಯನ ಸಹಜ ಸ್ವಭಾವ. ಅಂತೆಯೇ ಜ್ಞಾನವನ್ನು ಪಡೆಯಬೇಕೆನ್ನುವುದು ಮನುಷ್ಯನ ಸಹಜ ಸ್ವಭಾವ. ತನ್ನ ರಹಸ್ಯ ವನ್ನು, ಬ್ರಹ್ಮಾಂಡದ ಅರಿವನ್ನು ಪಡೆಯಲು ಹೊರಟ ಮನುಷ್ಯ ಜೀವನ ಎಷ್ಟು ಅಲ್ಪವಾದುದು! ಅವನ ಜ್ಞಾನೇಂದ್ರಿಯ ಮತ್ತು ಮನಸ್ಸು ಎಷ್ಟು ಸೀಮಿತವಾದುದು! ಅವನು ಜ್ಞಾನದ ವಿಭಿನ್ನ ಶಾಖೆ ಗಳನ್ನು ಜನ್ಮ ಜನ್ಮಗಳವರೆಗೆ ಅಧ್ಯಯನ ಮಾಡಿದರೂ ವಿಶ್ವದ ಜ್ಞಾನ ಭಂಡಾರ ಮುಕ್ತಾಯವಾಗದು. ಪಾತ್ರೆಯೊಳಗಿನ ಅಕ್ಕಿ ಬೆಂದಿದೆಯೇ ಎಂದು ತಿಳಿಯಲು ಒಂದೆರಡು ಅಕ್ಕಿ ಕಾಳನ್ನು ಮುಟ್ಟಿ ನೋಡಿದರೆ ತಿಳಿಯುವಂತೆ, ಯಾವ ಜ್ಞಾನವನ್ನು ಪಡೆಯುವುದರಿಂದ ಎಲ್ಲವನ್ನೂ ಅರಿತ ಹಾಗೆ ಆಗುತ್ತದೆ — ಎಂಬುದು ಶಿಷ್ಯನ ಪ್ರಶ್ನೆಯ ಅರ್ಥ.

ಈ ಸಂದರ್ಭದಲ್ಲಿ ನಾರದ-ಸನತ್ಕುಮಾರರ ಸಂವಾದವನ್ನು ನೆನಪಿಸಿಕೊಳ್ಳಬೇಕು. ನಾರದನು ವೇದ, ಪುರಾಣ, ದೇವವಿದ್ಯೆ , ಭೂತ ವಿದ್ಯೆ , ನಕ್ಷತ್ರವಿದ್ಯೆ ಇತ್ಯಾದಿಗಳನ್ನು ಕಲಿತಾಗಿತ್ತು . ಆದರೂ ಅವನು ಶೋಕರಹಿತನಾಗಿರಲಿಲ್ಲ. ಅವನು ವೇದವಿತ್ ಆಗಿದ್ದನು. ಆದರೆ ಆತ್ಮವಿತ್ ಆಗಿರಲಿಲ್ಲ ಎಂದು ಅವನೇ ಹೇಳುತ್ತಾನೆ. ‘‘ತಾವು ನನಗೆ ಆತ್ಮವಿದನಾಗುವ ಶಿಕ್ಷಣವನ್ನು ನೀಡಿರಿ. ಏಕೆಂದರೆ ಆತ್ಮವಿದನೊಬ್ಬನೇ ಶೋಕಸಾಗರವನ್ನು ದಾಟಬಲ್ಲನು’’ ಎನ್ನುತ್ತಾನೆ ನಾರದ. ಈ ಪ್ರಶ್ನೆ ಯಲ್ಲಿ ದ್ವೈತ ಜಗತ್ತಿನ ಹಿಂದಿನ ಅದ್ವೈತ ತತ್ತ್ವವನ್ನು ಅರಿಯುವ ಜಿಜ್ಞಾಸೆ ಅಡಗಿದೆ.

ಪ್ರಶ್ನೋಪನಿಷತ್ತಿನಲ್ಲಿ ಋಷಿ ಪಿಪ್ಪಲಾದನ ಬಳಿ ಐವರು ಶಿಷ್ಯರು ಒಂದೊಂದು ಪ್ರಶ್ನೆಗಳನ್ನು ಕೇಳಿದ್ದನ್ನು ನೋಡುತ್ತೇವೆ. ಆತ್ಮವಸ್ತುವನ್ನು ಅರಿಯಬೇಕೆನ್ನುವುದೇ ಅವರ ಪ್ರತಿಯೊಂದು ಪ್ರಶ್ನೆಯ ಉದ್ದೇಶ. ಆದರೆ ಅವರು ನೇರವಾಗಿ ಬ್ರಹ್ಮವಸ್ತುವನ್ನು ಪ್ರಶ್ನಿಸುವ ಬದಲು, ಪ್ರಜೆಗಳ ಉತ್ಪತ್ತಿ ಹೇಗೆ ಆಗುತ್ತದೆ, ಪ್ರಜೆಗಳನ್ನು ಪಾಲನೆ ಮಾಡುವ ದೇವರು ಯಾರು? ಅವರಲ್ಲಿ ಶ್ರೇಷ್ಠ ನಾರು? ಪ್ರಾಣವು ಶರೀರವನ್ನು ಹೇಗೆ ಪ್ರವೇಶಿಸುತ್ತದೆ? ಶರೀರದೊಳಗೆ ಮಲಗುವವನು, ಸ್ವಪ್ನ ಕಾಣುವವನು ಮತ್ತು ಎಚ್ಚರದಿಂದಿರುವವನು ಯಾರು? ಓಂಕಾರ ವನ್ನು ಧ್ಯಾನಿಸುತ್ತ ಪ್ರಾಣ ಬಿಡುವವನಿಗೆ ಸಿಗುವ ಗತಿಯೇನು? ಎಂದು ಪ್ರಶ್ನಿಸುತ್ತಾರೆ.

ಶ್ವೇತಾಶ್ವತರ ಉಪನಿಷತ್ತಿನ ಆರಂಭವೂ ಪ್ರಶ್ನೆಯಿಂದಲೇ ಆರಂಭ ವಾಗುತ್ತದೆ: ಕೆಲವು ಬ್ರಹ್ಮವಿದರಾದ ಋಷಿಗಳು ಮಾನವ ಜೀವನದ ಗುರಿಯನ್ನು ಕುರಿತು ಪರಸ್ಪರ ಚರ್ಚಿಸುತ್ತಾರೆ: *(ಇ.ಇ.)*

ಕಿಂ ಕಾರಣಂ ಬ್ರಹ್ಮ ಕುತಃ ಸ್ಮ ಜಾತಾ
ಜೀವಾಮ ಕೇನ ಕ್ವ ಚ ಸಂಪ್ರತಿಷ್ಠಾಃ ।

ಅಧಿಷ್ಠಿತಾಃ ಕೇನ ಸುಖೇತರೇಷು
ವರ್ತಾಮಹೇ ಬ್ರಹ್ಮವಿದೋ ವ್ಯವಸ್ಥಾಮ್ ॥

ಪರಬ್ರಹ್ಮವು ನಮ್ಮ ಉತ್ಪತ್ತಿಗೆ ಕಾರಣವೇನು? ನಮ್ಮ ಜನ್ಮ ಎಲ್ಲಿಂದ ಆಯಿತು? ನಾವು ಯಾವ ಶಕ್ತಿಯಿಂದ ಜೀವಂತವಾಗಿ ದ್ದೇವೆ? ನಮಗೆ ಆಧಾರ ಯಾವುದು? ಯಾರಿಂದ ಪ್ರೇರಿತರಾಗಿ ನಾವು ಸುಖ-ದುಃಖಗಳನ್ನು ಅನುಭವಿಸುವಂತಾಗುತ್ತದೆ ?

ಕೇನ ಉಪನಿಷತ್ತು ಪ್ರಶ್ನ ವಾಚಕದಿಂದಲೇ ಆರಂಭವಾಗುತ್ತದೆ.

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥

(ಕೇನೋಪನಿಷತ್ತು, ೧.೧)

'ಯಾರಿಂದ ಪ್ರೇರಿತವಾಗಿ ಮನಸ್ಸು ವಿಷಯಗಳೆಡೆಗೆ ಹೋಗು ತ್ತದೆ? ಪ್ರಾಣ ತನ್ನ ಕಾರ್ಯವನ್ನು ಮಾಡಲು ಕಾರಣನಾರು? ಯಾವುದ ರಿಂದ ಪ್ರೇರಿತವಾಗಿ ವಾಕ್ಕು ಹೊರಹೊಮ್ಮುತ್ತದೆ? ಚಕ್ಷು ಮತ್ತು ಶ್ರೋತ್ರ ವನ್ನು ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಿಸುವವರು ಯಾರು?'

ದೇಹ-ಇಂದ್ರಿಯ-ಪ್ರಾಣಗಳನ್ನು ನಾವು ಬಲ್ಲೆವು. ಸಾಮಾನ್ಯ ವಾಗಿ ನಾವು ಈ ಅಂಗಗಳ ಸತ್ಯತ್ವವನ್ನು ಯಾವ ವಿಚಾರವಿಲ್ಲದೆ ಒಪ್ಪಿಕೊಂಡಿದ್ದೇವೆ. ಮಾನವನ ಜ್ಞಾನಪಿಪಾಸೆಯು ಅವನಿಗೆ ಅವು ಗಳ ಸ್ವರೂಪ ಮತ್ತು ಅವುಗಳ ಹಿಂದಿರುವ ದೈವೀ ಶಕ್ತಿಯನ್ನು ಅರಿಯುವಂತೆ ಪ್ರೇರೇಪಿಸುತ್ತದೆ. ಈ ಬೇರೆ ಬೇರೆ ಪ್ರಶ್ನೆಗಳಿಂದ ವ್ಯಕ್ತಿ ಜಗತ್ತಿನ ಕಾರಣವನ್ನು ಶೋಧಿಸಬಯಸುತ್ತಾನೆ.

ಉಪನಿಷತ್ತಿನ ಪ್ರಶ್ನೆಗಳೊಂದಿಗೆ ಬುದ್ಧ ಮತ್ತು ಸ್ವಾಮಿ ವಿವೇ ಕಾನಂದರ ಪ್ರಶ್ನೆಗಳನ್ನು ಸೇರಿಸಿದರೆ ನಮ್ಮ ಈ ಪ್ರಶ್ನೆಗಳ ಸರಣಿಯು ಪೂರ್ಣವಾಗುತ್ತದೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಬಳಿ, ''ಮಹಾಶಯರೆ, ನೀವು ದೇವರನ್ನು ಕಂಡಿದ್ದೀರಾ?'' ಎಂದು ಕೇಳಿದರು. ಇದು ಅದೇ ಹಳೆಯ ಗೊಡ್ಡು ಪ್ರಶ್ನೆ ಅಲ್ಲ, ಆಧುನಿಕ ಸಂಶಯವಾದಿ ವಿಚಾರಧಾರೆಯನ್ನು ಪ್ರತಿನಿಧಿಸುವ ಜಿಜ್ಞಾಸೆ ಇದು. ಇಂದ್ರಿಯಗೋಚರ ಜಗತ್ತಿನ ಹಿನ್ನೆಲೆಯಲ್ಲಿ ಒಂದು ಅತೀಂದ್ರಿಯ ನಿತ್ಯಸತ್ಯ ವಸ್ತು ಇದೆ ಏನು? ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವೆ? ವಿಷಯಸುಖಭೋಗಗಳು ಜೀವನದ ಗುರಿ ಏನು? ಮೃತ್ಯುವಿ ನೊಂದಿಗೆ ಜೀವನ ಮುಕ್ತಾಯವಾಗುವುದೇನು? ಅಥವಾ ಭಗವತ್ ಸಾಕ್ಷಾತ್ಕಾರದಿಂದ ಅಮರರಾಗುವುದು ಜೀವನದ ಗುರಿ ಏನು? ಈ ಎಲ್ಲ ಭಾವನೆಯು ಆ ಒಂದು ಪುಟ್ಟ ಪ್ರಶ್ನೆಯಲ್ಲಿ ಅಡಗಿದೆ.

ಬುದ್ಧ ತನಗೆ ತಾನೇ ಯಾವ ಪ್ರಶ್ನೆಗಳನ್ನು ಕೇಳಿದನೆಂಬುದು ವಿಶ್ವಪ್ರಸಿದ್ಧ. ರೋಗ, ವೃದ್ಧಾಪ್ಯ ಮತ್ತು ಮರಣವನ್ನು ಕಂಡು ಅವನು ತನ್ನ ಸಾರಥಿಯನ್ನು ಆ ಕುರಿತಾಗಿ ಪ್ರಶ್ನಿಸಿದನು. ರೋಗ, ವೃದ್ಧಾಪ್ಯ ಇವೆಲ್ಲ ಅನಿವಾರ್ಯ, ಅಪರಿಹಾರ್ಯ ಎಂಬ ಅವನ ಉತ್ತರದಿಂದ ಬುದ್ಧನಿಗೆ ಸಮಾಧಾನವಾಗಲಿಲ್ಲ. ಬುದ್ಧನು ರೋಗ, ವೃದ್ಧಾಪ್ಯ ಮತ್ತು ಸಾವನ್ನು ದುಃಖ ಎಂದು ಕರೆದನು. ದುಃಖದ ಕಾರಣವನ್ನು ಮತ್ತು ಅದಕ್ಕೆ ಪರಿಹಾರವನ್ನು ಪಡೆಯಲು ಅವನು ಗೃಹತ್ಯಾಗ ಮಾಡಿದನು.

ಮೇಲಣ ಎಲ್ಲ ಪ್ರಶ್ನೆಗಳ ಉತ್ತರಗಳು ಎಲ್ಲ ಶಾಸ್ತ್ರಗಳಲ್ಲಿ, ಗ್ರಂಥ ಗಳಲ್ಲಿ ಮತ್ತು ಮಹಾಪುರುಷರ ಉಪದೇಶವಾಣಿಗಳಲ್ಲಿ ಇಂದು ನಮಗೆ ಸುಲಭವಾಗಿ ಸಿಗುತ್ತವೆ. ಆದರೂ ಈ ಪ್ರಶ್ನೆಗಳು ಪ್ರಶ್ನೆ ಗಳಾಗಿಯೇ ಇರುತ್ತವೆ. ಕಾರಣವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಈ ಪ್ರಶ್ನೆಗಳಿಗೆ ಉತ್ತರವನ್ನು ತಾನೇ ಪಡೆಯಬೇಕು. ಇದು ಪ್ರಾಚೀನ ನಿಯಮ, ಇವತ್ತಿನ ನಿಯಮ ಮತ್ತು ಭವಿಷ್ಯದ ನಿಯಮವೂ ಹೌದು. ದುಃಖಕ್ಕೆ ಕಾರಣ ತೃಷ್ಣೆ. ಭಗವಂತನನ್ನು ಕಾಣಬಹುದು. ದೇಹ ತೀರಿಕೊಂಡರೂ ಆತ್ಮ ಅಮರ - ಎಂದೆಲ್ಲ ಬೌದ್ಧಿಕವಾಗಿ ತಿಳಿದು ಕೊಂಡ ಮಾತ್ರಕ್ಕೆ ದುಃಖ ನಾಶವಾಗಲಾರದು. ದೇವರ ದರ್ಶನವೂ ಆಗದು, ಆತ್ಮಸಾಕ್ಷಾತ್ಕಾರವೂ ಆಗದು. ಇವುಗಳ ಉತ್ತರವನ್ನು ನಾವು ಸಾಕ್ಷಾತ್ಕಾರದಿಂದ ಪಡೆಯದೆ, ಆ ಉತ್ತರವನ್ನು ರಕ್ತಗತವಾಗಿಸಿ ಕೊಳ್ಳದೆ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವುದನ್ನೇ ಸಾಧನೆ ಎಂದು ಕರೆಯಲಾಗಿದೆ.

ಪಾರ್ಥಸಾರಥಿ ಶ್ರೀಕೃಷ್ಣ: ಪರಿಪೂರ್ಣ ಜೀವನಾದರ್ಶ

ಧರ್ಮಗ್ರಂಥಗಳಲ್ಲಿ ರಥ

ಸೂಕ್ಷ್ಮ ಆಧ್ಯಾತ್ಮಿಕ ತತ್ತ್ವಗಳನ್ನು ದೃಷ್ಟಾಂತಗಳು ಮತ್ತು ಆಖ್ಯಾನ ಗಳ ಸಹಾಯದಿಂದ ವಿವರಿಸಲಾಗಿದೆ. ರಥ ಅಂತಹ ಒಂದು ಹೋಲಿಕೆ. ಆಧ್ಯಾತ್ಮಿಕ ಸಾಹಿತ್ಯದಲ್ಲಿ ಅನೇಕ ಕಡೆಗಳಲ್ಲಿ ರಥದ ಹೋಲಿಕೆಯನ್ನು ಕೊಡಲಾಗಿದೆ. ಕಠೋಪನಿಷತ್ತಿನಲ್ಲಿ ದೇಹವನ್ನು ರಥಕ್ಕೆ ಹೋಲಿಸಿ ದ್ದಾರೆ. ತನ್ಮೂಲಕ ಜೀವಾತ್ಮನ ಸ್ವರೂಪವನ್ನು ವಿವರಿಸಿದ್ದಾರೆ:

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥

'ಆತ್ಮನನ್ನು ರಥಿ ಎಂದು ತಿಳಿ. ಶರೀರವನ್ನು ರಥ ಎಂದು ತಿಳಿ ದುಕೊ. ಬುದ್ಧಿಯನ್ನು ಸಾರಥಿ ಮತ್ತು ಮನಸ್ಸನ್ನು ಲಗಾಮು ಎಂದು ತಿಳಿದುಕೋ. ಇಂದ್ರಿಯಗಳನ್ನು ಕುದುರೆಗಳು ಎಂದು ತಿಳಿ. ಅವು ವಿಷಯಗಳೆಂಬ ಮಾರ್ಗದಲ್ಲಿ ಧಾವಿಸುತ್ತವೆ. ಇಂದ್ರಿಯ, ಮನಸ್ಸು ಮತ್ತು ಬುದ್ಧಿಯಿಂದ ಕೂಡಿದ ಆತ್ಮನನ್ನು ಭೋಕ್ತಾ ಅಥವಾ ಜೀವ ಎಂದು ಕರೆಯಲಾಗಿದೆ.'

ತುಲಸೀದಾಸರ 'ರಾಮಚರಿತಮಾನಸ'ದ ಲಂಕಾಕಾಂಡದಲ್ಲಿ ಧರ್ಮರಥವನ್ನು ಹೀಗೆ ವರ್ಣಿಸಲಾಗಿದೆ:

ರಾವನು ರಥೀ ವಿರಥ ರಘುಬೀರಾ ।
ದೇಖಿ ವಿಭೀಷನ ಭಯಉ ಅಧೀರಾ ॥
ಅಧಿಕ ಪ್ರೀತಿ ಮನ ಭಾ ಸಂದೇಹಾ ।
ಬಂದಿ ಚರನ ಕಹ ಸಹಿತ ಸನೇಹಾ ॥
ನಾಥ ನ ರಥ ನಹಿ ತನ ಪದ ತ್ರಾನಾ ।
ಕೇಹಿ ವಿಧಿ ಜಿತಬ ವೀರ ಬಲವಾನಾ ॥
ಸುನಹು ಸಖಾ ಕಹ ಕೃಪಾನಿಧಾನಾ ।
ಜಂಹಿ ಜಯ ಹೋಇ ಸೋ ಸ್ಯಂದನ ಆನಾ ॥
ಧೀರಜ ಸೌರಜ ತೇಹಿ ರಥ ಚಾಕಾ ।
ಸತ್ಯ ಶೀಲ ದೃಢ ಧ್ವಜಾ ಪತಾಕಾ ॥
ಬಲ ವಿವೇಕ ದಮ ಪರಹಿತ ಘೋರೇ ।
ಛಮಾ ಕೃಪಾ ಸಮತಾ ರಜು ಜೋರೇ ॥
ಈಸ ಭಜನು ಸಾರಥೀ ಸುಜಾನಾ ।
ವಿರತಿ ಚರ್ಮ ಸಂತೋಷ ಕೃಪಾನಾ ॥

(ಟ, ೧೧೦, ೧ - ೪)

ಇಲ್ಲಿ ನೈತಿಕ ಆದರ್ಶಗಳಿಂದ ಕೂಡಿದ ರಥದ ಒಂದು ಸುಂದರವಾದ ಉದಾಹರಣೆಯನ್ನು ಕೊಡಲಾಗಿದೆ. ಶೌರ್ಯ ಮತ್ತು ಧೈರ್ಯಗಳು ರಥದ ಎರಡು ಚಕ್ರಗಳು. ಸತ್ಯ ಮತ್ತು ಶೀಲ ರಥದ ಧ್ವಜ ಮತ್ತು ಪತಾಕೆ. ಬಲ, ವಿವೇಕ, ದಮ ಮತ್ತು ಪರಹಿತಗಳು ರಥದ ಕುದುರೆಗಳು. ಅದಕ್ಕೆ ಕೃಪೆ, ಕ್ಷಮೆ ಮತ್ತು ಸಮತೆಯ ಲಗಾಮು. ಭಗವತ್ ಸ್ಮರಣೆಯೇ ಈ ರಥದ ಸಾರಥಿ.

ಜಗನ್ನಾಥ ಮಹಾಪ್ರಭುವಿನ ಒಂದು ಪ್ರಸಿದ್ಧವಾದ ರಥ ಇದೆ. ಅದನ್ನು ವೈಷ್ಣವರು ಪರಮ ಪವಿತ್ರವೆಂದು ಬಗೆಯುತ್ತಾರೆ. ರಥಾರೂಢನಾದ ಜಗನ್ನಾಥನ ದರ್ಶನ ಮಾಡುವ ಜೀವರಿಗೆ ಅವನು ಜನ್ಮ ಮರಣ ಚಕ್ರದಿಂದ ಮುಕ್ತಿಯನ್ನು ನೀಡುತ್ತಾನೆ, ''ರಥೇ ಚ ವಾಮನಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ''. ಇದರ ಇನ್ನೊಂದು ಅರ್ಥ, ದೇಹವೆಂಬ ರಥದಲ್ಲಿರುವ ಆತ್ಮನ ಶುದ್ಧಚೈತನ್ಯದ ದರ್ಶನದಿಂದ ಮುಕ್ತಿ.

ಇನ್ನೊಂದು ರಥ ಇದೆ. ಹಿಂದುಗಳೆಲ್ಲರೂ ಆ ರಥವನ್ನು ಬಲ್ಲರು. ಅರ್ಜುನನ ರಥ, ಶ್ರೀಕೃಷ್ಣ ಗೀತೆಯನ್ನು ಉಪದೇಶಿಸಿದ ರಥ. ಗೀತೆಯ ಉಪದೇಶಗಳು ಅತಿ ಜನಪ್ರಿಯ ಹಾಗೂ ಮಹತ್ವಪೂರ್ಣವಾದ್ದರಿಂದ ಯಾವ ರಥದಲ್ಲಿ ಕುಳಿತು ಪ್ರಭು ಆ ಚರಮಸಂದೇಶಗಳನ್ನು ಮೊಳಗಿದನೋ ಆ ರಥ ಗೌಣವಾಗಿರಲು ಸಾಧ್ಯವಿಲ್ಲ. ಆ ರಥವನ್ನು ಕೇವಲ ಒಂದು ವಾಹನ ಎಂದು ಬಗೆಯಲಾಗದು. ಅದರ ಮಹಿಮೆಯೆಡೆಗೆ ನಾವು ಗಮನಕೊಟ್ಟಿಲ್ಲವೆಂದೆನ್ನಿಸುತ್ತದೆ. ಸ್ವಾಮಿ ವಿವೇಕಾನಂದರು ಆ ರಥದ ಆಧ್ಯಾತ್ಮಿಕ ಅರ್ಥದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ''ಗೀತೆಯ ಮೂರ್ತಸ್ವರೂಪವಾಗಿ ನಾವು ಕೃಷ್ಣನ ಚಿತ್ರಣವನ್ನು ನೀಡತಕ್ಕದ್ದು. ಶ್ರೀಕೃಷ್ಣ ನಿರಂತರ ಕಾರ್ಯಶೀಲನಾಗಿದ್ದಾನೆ. ಆದರೆ ಅವನ ಮುಖದಲ್ಲಿ ಗಗನದಂತಹ ಗಾಂಭೀರ್ಯ: ಶಾಂತಿ ಮತ್ತು ಪ್ರಸನ್ನತೆ ತುಂಬಿದೆ. ಗೀತೆಯ ಮೂಲತತ್ತ್ವ ಇದೇ ಆಗಿದೆ — ಎಲ್ಲ ಪರಿಸ್ಥಿತಿಗಳಲ್ಲಿ ಶಾಂತ ಮತ್ತು ಆನುದ್ವಿಗ್ನರಾಗಿದ್ದು ದೇಹ ಮನ ಪ್ರಾಣಗಳನ್ನು ಭಗವಂತನ ಪಾದ ಪದ್ಮಗಳಲ್ಲಿ ಅರ್ಪಿಸುವುದು.'' ಕೃಷ್ಣನ ರಥ ಧ್ಯಾನವಸ್ತುವೇ ಸರಿ. ಈ ರಥ ಕಠೋಪನಿಷತ್ತಿನ ರಥದ ಹೋಲಿಕೆಯನ್ನು, ರಾಮಚರಿತ ಮಾನಸದ ಧರ್ಮರಥವನ್ನು ನೆನಪಿಸುತ್ತದೆ. ಈ ರಥ ಅತ್ಯುನ್ನತ ಆದರ್ಶವನ್ನು ಪ್ರತಿನಿಧಿಸುತ್ತದೆ.

ರಥದ ಆಧ್ಯಾತ್ಮಿಕ ಅರ್ಥ

ರಥವನ್ನು ವರ್ಣಿಸುತ್ತ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ಶ್ರೀಕೃಷ್ಣ ಕುದುರೆಗಳ ಲಗಾಮನ್ನು ಯಾವ ರೀತಿ ಹಿಡಿದುಕೊಂಡಿದ್ದಾನೆಂದರೆ ಅವು ತಮ್ಮ ಹಿಂಗಾಲುಗಳಿಂದ ನಿಂತಿವೆ, ಮುಂಗಾಲುಗಳು ಗಾಳಿಯಲ್ಲಿ ತೇಲುತ್ತಿವೆ. ಅವುಗಳ ಬಾಯಿಗಳು ತೆರೆದಿವೆ. ಶಕ್ತಿಶಾಲಿಯಾದ, ಚಂಚಲವಾದ, ಓಡಲುದ್ಯುಕ್ತವಾದ ಕುದುರೆಗಳು ಪಟುವಾದ, ಪ್ರಬಲ ಇಂದ್ರಿಯಗಳ ಪ್ರತೀಕ. ಅಂತಹ ಇಂದ್ರಿಯಗಳನ್ನು ಮನಸ್ಸೆಂಬ ಲಗಾಮಿನಿಂದ ಹಿಡಿದುಕೊಳ್ಳಲಾಗಿದೆ.''

ಇಂದ್ರಿಯಗಳು ಸ್ವಾಭಾವಿಕವಾಗಿ ಬಹಿರ್ಮುಖ. ಬಾಹ್ಯವಿಷಯಗಳೆಡೆಗೆ ಧಾವಿಸುವ ಅವುಗಳ ಪ್ರವೃತ್ತಿಯನ್ನು ತಡೆದು, ಅವನ್ನು ಅಂತರ್ಮುಖವಾಗಿಸುವುದು, ಆತ್ಮಸಾಕ್ಷಾತ್ಕಾರವನ್ನು ಬಯಸುವ ಸಾಧಕನ ಪಾಲಿನ ದೊಡ್ಡ ಸಮಸ್ಯೆ. ಕಠೋಪನಿಷತ್ತಿನಲ್ಲಿ ಹೇಳಿದ ಹಾಗೆ,

ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂ
ಸ್ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ ।
ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷ-
ದಾವೃತ್ತಚಕ್ಷುರಮೃತತ್ವಮಿಚ್ಛನ್ ॥ (೨.೬.೬.)

'ಭಗವಂತ ಇಂದ್ರಿಯಗಳನ್ನು ಬಹಿರ್ಮುಖವಾಗಿರಿಸಿ ಅವನ್ನು ಕೊಲೆ ಮಾಡಿದಂತಿದೆ. ಆದ್ದರಿಂದ ಅವು ಹೊರಗೇ ಹೋಗುತ್ತಿರುತ್ತವೆ. ಒಳಗೆ ಅಲ್ಲ. ಅಮೃತತ್ವವನ್ನು ಬಯಸುವ ಯಾರೋ ಒಬ್ಬ ಧೀರ ತನ್ನ ಇಂದ್ರಿಯಗಳನ್ನು ಒಳಮುಖವಾಗಿ ತಿರುಗಿಸಿಕೊಳ್ಳುತ್ತಾನೆ ಮತ್ತು ಪ್ರತ್ಯಗಾತ್ಮನನ್ನು ಪಡೆಯಬಯಸುತ್ತಾನೆ.'

ಭಗವದ್ಗೀತೆಯು ಹೇಳುವಂತೆ ಆಮೆಯು ತನ್ನ ಅಂಗಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ, ಇಂದ್ರಿಯಗಳನ್ನು ವಿಷಯಗಳಿಂದ ಬಿಡಿಸಿ ಒಳಕ್ಕೆ ಎಳೆದುಕೊಳ್ಳಬೇಕು. ಆದರೆ ಮನುಷ್ಯನ ಜ್ಞಾನೇಂದ್ರಿಯಗಳನ್ನು ಆಮೆಯ ಇಂದ್ರಿಯಗಳ ಹಾಗೆ ಶಬ್ದಶಃ ಒಳಕ್ಕೆ ಎಳೆದುಕೊಳ್ಳಲಾಗದು. ಅವನು ಹೆಚ್ಚೆಂದರೆ ಕಣ್ಣುಗಳನ್ನು ಮುಚ್ಚಬಲ್ಲನು. ಕಿವಿಯಲ್ಲಿ ಹತ್ತಿ ತುರುಕಿಸಿ ಏನೂ ಕೇಳದಂತೆ ಮಾಡಬಲ್ಲನು. ಆದರೆ ಮೂಗು ಮತ್ತು ಚರ್ಮವನ್ನು ಇದೇ ರೀತಿ ವಿಷಯವಸ್ತುಗಳಿಂದ ಮುಚ್ಚಲು ಸಾಧ್ಯವಿಲ್ಲ. ಕೆಲವರು ವಿಷಯಸಂಪರ್ಕಗಳಿಂದ ತಪ್ಪಿಸಿಕೊಳ್ಳಲು ನಿರ್ಜನ ಸ್ಥಳಕ್ಕೆ ಹೋಗುತ್ತಾರೆ. ಇನ್ನು ಕೆಲವರು ಅವಿವೇಕದಿಂದ ಕಠೋರ ತಪವನ್ನು ಮಾಡುತ್ತ ಶರೀರವನ್ನು ಕೃಶಗೊಳಿಸಿ ಇಂದ್ರಿಯಗಳನ್ನು ದುರ್ಬಲಗೊಳಿಸಿಕೊಳ್ಳುತ್ತಾರೆ. ಇದು ಕುದುರೆಗಳನ್ನು ಹೊಡೆದು ಅವನ್ನು ಅರೆಜೀವವಾಗಿಸುವಂತಿದೆ. ಇದು ಇಂದ್ರಿಯನಿಗ್ರಹದ ಸರಿಯಾದ ವಿಧಾನ ಅಲ್ಲ. ಬಹಿರಿಂದ್ರಿಯಗಳು ಮೆದುಳಿನಲ್ಲಿರುವ ಇಂದ್ರಿಯಗಳ ಕೇಂದ್ರಗಳೊಂದಿಗೆ ನರವ್ಯೂಹದಿಂದ ಜೋಡಿಸಲ್ಪಟ್ಟ ಬಾಹ್ಯ ಉಪಕರಣಗಳಷ್ಟೇ. ಮೆದುಳಿನಲ್ಲಿರುವ ಅಂತರಿಂದ್ರಿಯವನ್ನು ಸಂಯಮಕ್ಕೆ ತರುವುದೇ ನಿಜವಾದ ಇಂದ್ರಿಯ ನಿಗ್ರಹ. ಎಲ್ಲ ಸಂತ ಮಹಾತ್ಮರಲ್ಲಿ ನಾವು ಈ ಬಗೆಯ ನಿಗ್ರಹವನ್ನೇ

ಗಮನಿಸುತ್ತೇವೆ. ಚೈತನ್ಯ ಮಹಾಪ್ರಭುವಿನ ನಾಲಗೆಯ ಮೇಲೆ ಸಕ್ಕರೆಯನ್ನು ಹಾಕಿದರೂ ಅದು ಒದ್ದೆಯಾಗಲಿಲ್ಲ. ಅದು ಗಾಳಿಗೆ ಹಾರಿ ಹೋಯಿತು. ಶ್ರೀರಾಮಕೃಷ್ಣರ ಭಾವಚಿತ್ರದಲ್ಲಿ ಅವರ ನೇತ್ರಗಳು ಅರೆತೆರೆದಿವೆ. ಆದರೆ ಅವರು ಅತ್ಯುಚ್ಚ ಸಮಾಧಿಸ್ಥಿತಿಯಲ್ಲಿದ್ದಾರೆ. ಅವರು ಪೂರ್ಣವಾಗಿ ಬಾಹ್ಯಜ್ಞಾನಶೂನ್ಯರಾಗಿದ್ದಾರೆ. ಇದರ ಅರ್ಥ ಇಂದ್ರಿಯಗಳು ಪ್ರಬಲವಾಗಿ, ಪಟುವಾಗಿದ್ದರೂ ಅವುಗಳ ನಿಗ್ರಹ ಸಾಧ್ಯವಿದೆ. ಮತ್ತು ಅದೇ ನಿಜವಾದ ಅರ್ಥದಲ್ಲಿ ನಿಗ್ರಹ.

ಮನಸ್ಸೆಂಬ ಲಗಾಮು ಹೇಗೆ ಇರಬೇಕು? ಭಗವಂತ ಹೇಳುವಂತೆ ವ್ಯಕ್ತಿ ಮನೋಗತವಾದ ಕಾಮನೆಗಳನ್ನೆಲ್ಲ ತೊರೆದಾಗ ಸ್ಥಿತಪ್ರಜ್ಞನೆಂದು ಕರೆಯಲ್ಪಡುತ್ತಾನೆ. ಮನಸ್ಸಿನಲ್ಲಿ ಒಂದಾದ ಮೇಲೊಂದರಂತೆ ಅಸಂಖ್ಯ ವಿಚಾರಗಳು ಏಳುತ್ತಲೇ ಇರುತ್ತವೆ. ಆದರೆ ಮನಸ್ಸು ವಿಷಯಗಳಲ್ಲಿ ಆಸಕ್ತಿಯನ್ನು ತಾಳಿದಾಗ ಮಾತ್ರ ಕಾಮನೆಗಳು ಹುಟ್ಟುತ್ತವೆ – ಸಂಗಾತ್ ಸಂಜಾಯತೇ ಕಾಮಃ – ಎಂದಂತೆ. ಆಸಕ್ತಿ ಮತ್ತು ರಾಗ ದ್ವೇಷರಹಿತನಾದಾಗ ವ್ಯಕ್ತಿ ವಿಷಯಗಳ ಮಧ್ಯೆಯೂ ಅವಿಚಲನಾಗಿ ಇರುತ್ತಾನೆ. ಮನಸ್ಸಿನಲ್ಲಿ ಒಂದಾದ ಮೇಲೊಂದರಂತೆ ಏಳುವ ಚಿತ್ತ ವೃತ್ತಿಗಳು ಹಾನಿಕಾರಕವಲ್ಲ. ಆದರೆ ಆಸಕ್ತಿ ಮತ್ತು ರಾಗ ದ್ವೇಷಗಳಿಂದ ಪ್ರೇರಿತನಾಗಿ ವಿಷಯಗಳ ಕಡೆಗೆ ಧಾವಿಸುವುದು ಮತ್ತು ಫಲಾಪೇಕ್ಷೆಯಿಂದ ಕರ್ಮನಿರತನಾಗುವುದು ಬಂಧನಕ್ಕೆ ಕಾರಣ. ಗೀತೆಯಲ್ಲಿ ಅದನ್ನು 'ಸಂಕಲ್ಪ ಪ್ರಭವಾನ್ ಕಾಮಾನ್' ಎಂದು ಕರೆಯಲಾಗಿದೆ. ಶ್ರೇಷ್ಠ ಭಕ್ತ ಅಥವಾ ಗುಣಾತೀತನಾದ ಮುನಿ ತನ್ನ ಮನಸ್ಸಿನಲ್ಲೇಳುವ ವಿಚಾರಗಳನ್ನು ಕಾಮನೆಯಾಗಿ ಪರಿವರ್ತಿತವಾಗಬಿಡುವುದಿಲ್ಲ. ಅವನು ಸರ್ವಾರಂಭ ಪರಿತ್ಯಾಗ, ಸರ್ವಸಂಕಲ್ಪ ಪರಿತ್ಯಾಗ ಮಾಡಿರುತ್ತಾನೆ.

ರಥದ ಲಗಾಮು ಸಾರಥಿಯ ಕೈಯಲ್ಲಿರುತ್ತದೆ. ಸಾರಥಿ ಬುದ್ಧಿಯ ಪ್ರತೀಕ. ಬುದ್ಧಿ ಏಕನಿಷ್ಠವಾಗಿರಬೇಕು. ಬುದ್ಧಿ ಭಗವಂತನಲ್ಲಿ ತದ್ಗತವಾಗಿರಬೇಕು. ತನ್ನ ಕುರಿತಾದ, ಜಗತ್ತಿನ ಕುರಿತಾದ ದೃಷ್ಟಿಯನ್ನೇ ಬುದ್ಧಿ ಎಂದು ಕರೆಯಲಾಗಿದೆ. ಗೀತೆಯಲ್ಲಿ ಸಾಂಖ್ಯ ಬುದ್ಧಿ ಅಥವಾ ಯೋಗಬುದ್ಧಿ ಎಂದು ಹೇಳಿರುವ ಕಡೆಯಲ್ಲಿ ಆ ಶಬ್ದಗಳನ್ನು ಇದೇ ಅರ್ಥದಲ್ಲಿ ಹೇಳಲಾಗಿದೆ. ಹೆಚ್ಚಿನ ಜನರಿಗೆ ದೇಹದಲ್ಲಿ ಆತ್ಮಬುದ್ಧಿ ಮತ್ತು ಜಗತ್ತಿನ ವಿಷಯದಲ್ಲಿ ಮಮತ್ವಬುದ್ಧಿ ಇರುತ್ತದೆ. ''ನಾನು ದೇಹ, ಜಗತ್ತಿನ ವಿಷಯಗಳು ನನ್ನವು'' ಇದೇ ಅಹಂಕಾರ. ಇದೇ ಬಂಧನಕ್ಕೆ ಕಾರಣ. ಆದ್ದರಿಂದ ಮನಸ್ಸು ಇಂದ್ರಿಯಗಳ ಮೂಲಕ ವಿಷಯಗಳೆಡೆಗೆ ಧಾವಿಸುತ್ತದೆ. ಆದರೆ ನಾನು ದೇಹವಲ್ಲ, ನಿತ್ಯ, ಅಮರ ಆತ್ಮ, ಬಾಹ್ಯ ಜಗತ್ತಿನ ಆಸೆ ಆಕಾಂಕ್ಷೆಗಳೆಲ್ಲ ಕ್ಷಣ ಭಂಗುರ, ಎಂದು ಅರಿತಾಗ ಮನಸ್ಸು ಶಾಂತವಾಗುತ್ತದೆ. ಆಗ ಇಂದ್ರಿಯಗಳೂ ಸಹಜವಾಗಿ ಅಂತರ್ಮುಖವಾಗುತ್ತವೆ.

ಇದರ ಅರ್ಥ ಇಂದ್ರಿಯಗಳು ಪಟುವಾಗಿದ್ದು, ಬಲಿಷ್ಠವಾಗಿರಬೇಕು. ಆದರೆ ಸಂಯಮದಲ್ಲಿರಬೇಕು. ಮನಸ್ಸು ಸಂಕಲ್ಪಗಳು ಮತ್ತು ರಾಗದ್ವೇಷಗಳಿಂದ ರಹಿತವಾಗಿರಬೇಕು. ಬುದ್ಧಿ ಅಹಂಕಾರ – ಮಮಕಾರಗಳಿಂದ ಪಾರಾಗಿರಬೇಕು. ಇಂತಹ ಇಂದ್ರಿಯ – ಮನಸ್ಸು ಗಳಿಂದ ಕೂಡಿದವನು ತನ್ನ ಗುರಿಯನ್ನು ಸಾಧಿಸುತ್ತಾನೆ. ಆ ಗುರಿಯನ್ನು ವಿಷ್ಣುವಿನ ಪರಮಪದ – ಎಂದು ಕರೆಯಲಾಗಿದೆ: *(೧.೩.೯)*

ವಿಜ್ಞಾನಸಾರಥಿರ್ಯಸ್ತು ಮನಃ ಪ್ರಗ್ರಹವಾನ್ನರಃ ।
ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥

ಭಗವದ್ಗೀತೆಯ ಪ್ರಕಾರ ಕಾಮನೆಗಳನ್ನು ತೊರೆಯುವವನು, ಅಹಂಕಾರ ಮಮಕಾರಗಳಿಂದ ರಹಿತನಾಗಿರುವವನು ಶಾಂತಿಯನ್ನು ಪಡೆಯುತ್ತಾನೆ:

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರ ಸ ಶಾಂತಿಮಧಿಗಚ್ಛತಿ ॥

ಇದನ್ನೇ ಬ್ರಾಹ್ಮೀಸ್ಥಿತಿ ಎಂದು ಕರೆಯಲಾಗಿದೆ. ಈ ಸ್ಥಿತಿಯನ್ನು ಪಡೆದ ಜ್ಞಾನಿಯನ್ನು ಸ್ಥಿತಪ್ರಜ್ಞನೆಂದು ಕರೆಯಲಾಗುತ್ತದೆ. ಹೀಗೆ ಗೀತೆಯ ರಥವು ಗೀತೆಯ ಸಂದೇಶವಾದ 'ಸ್ಥಿತಪ್ರಜ್ಞದರ್ಶನ'ವನ್ನು ಸಾರುತ್ತಿದೆ.

ಪಾರ್ಥಸಾರಥಿ ಶ್ರೀಕೃಷ್ಣ

ಗೀತೆ ಮತ್ತು ಕಠೋಪನಿಷತ್ತಿನ ನೆರವಿನಿಂದ ನಮಗೆ ರಥದ ಆಧ್ಯಾತ್ಮಿಕ ಅರ್ಥ ಮನವರಿಕೆಯಾಗುತ್ತದೆ. ಇಲ್ಲಿ ಶ್ರೀಕೃಷ್ಣನು ಸಾರಥಿಯ ಸ್ಥಾನದಲ್ಲಿರುವುದು ಬಹಳ ವಿಶೇಷವಾದುದು. ಸ್ವಾಮಿ ವಿವೇಕಾನಂದರು ನಮ್ಮ ಗಮನವನ್ನು ಆ ವಿಷಯದ ಕಡೆಗೆ ಸೆಳೆಯುತ್ತಾರೆ. ಬದ್ಧ ಜೀವದ ಪ್ರತಿನಿಧಿಯಾದ ವಿಷಾದಗ್ರಸ್ತ ಅರ್ಜುನನಿಗೆ ಶ್ರೀಕೃಷ್ಣ ಮಾರ್ಗದರ್ಶನ ಮಾಡುತ್ತಿದ್ದಾನೆ. ಧರ್ಮರಥದಲ್ಲಿ ಶ್ರೀ ತುಲಸೀದಾಸರು ''ಈಸ ಭಜನು ಸಾರಥಿ ಸುಜಾನ'' – ಈಶ ಭಜನೆಯಲ್ಲಿ ನಿರತನಾದ ವಿವೇಕಿ ಸಾರಥಿ ಇರುವಲ್ಲಿ ಚಿಂತೆಯ ಮಾತೇ ಇಲ್ಲ ಎಂದಿರುವರು. ಯಾವ ರಥಕ್ಕೆ ಸಾಕ್ಷಾತ್ ಭಗವಂತನೇ ಸಾರಥಿಯಾಗಿ ದ್ದಾನೆಯೋ ಅವನ ಭಾಗ್ಯವನ್ನೇನು ಕೇಳುತ್ತೀರಿ?

ಭಗವಂತನೇ ಸಾರಥಿಯಾಗಿರುವುದು ಇನ್ನೊಂದು ದೃಷ್ಟಿಯಿಂದ ಮಹತ್ವಪೂರ್ಣವಾದುದು. ಭಗವಂತ ಕೇವಲ ಸ್ಥಿತಪ್ರಜ್ಞ ಅಥವಾ ವಿಷ್ಣುವಿನ ಪರಮಪದದಲ್ಲಿ ನೆಲೆನಿಂತ ಯೋಗಿ ಅಲ್ಲ. ಅವನು ಸಾಕ್ಷಾತ್ ವಿಷ್ಣು. ಭಗವಂತ ಸಾರಥಿಯಾಗಿರುವುದು ಸ್ಥಿತಪ್ರಜ್ಞತ್ವಕ್ಕಿಂತ ಹೆಚ್ಚಿನದೇನನ್ನೋ ಹೇಳುತ್ತಿದೆ. ಒಬ್ಬ ಮುನಿ ಸ್ಥಿತಪ್ರಜ್ಞನಾದ ತರುವಾಯ ಇತರರನ್ನು ಉದ್ಧರಿಸಲು ಯತ್ನಿಸಬೇಕು. ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯಲ್ಲೇ ಇರಬಯಸಿದ ನರೇಂದ್ರನಿಗೆ ಈ ಮಾತನ್ನು ನೆನಪಿಸಿದ್ದರು. ನರೇಂದ್ರನು ದುಃಖಸಂತಪ್ತ ಮಾನವತೆಗೆ ದೊಡ್ಡ ವಟವೃಕ್ಷದಂತೆ ಆಶ್ರಯ ನೀಡುವಂತಾಗಲೆಂಬುದು ಅವರ ಬಯಕೆಯಾಗಿತ್ತು. ಇದೇ ಭಾವವನ್ನು ಈ ಕೆಳಗಿನ ಶ್ಲೋಕದಲ್ಲಿ ಬಹಳ ಸುಂದರವಾಗಿ ವ್ಯಕ್ತಪಡಿಸಲಾಗಿದೆ:

ದುರ್ಜನಃ ಸಜ್ಜನೋ ಭೂಯಾತ್ ಸಜ್ಜನಃ ಶಾಂತಿಮಾಪ್ನುಯಾತ್ ।
ಶಾಂತೋ ಮುಚ್ಯೇತ ಬಂಧೇಭ್ಯೋ ಮುಕ್ತಶ್ಚಾನ್ಯಾನ್
ವಿಮೋಚಯೇತ್ ॥

'ದುರ್ಜನರು ಸಜ್ಜನರಾಗಲಿ, ಸಜ್ಜನರು ಶಾಂತಿಯನ್ನು ಪಡೆಯಲಿ, ಶಾಂತನು ಬಂಧಮುಕ್ತನಾಗಲಿ, ಬಂಧಮುಕ್ತರು ಇತರರ ಮುಕ್ತಿಗಾಗಿ ಪ್ರಯತ್ನಿಸಲಿ.' ನಮ್ಮ ಕೃಷ್ಣಾರ್ಜುನ ರಥದಲ್ಲಿ ಅರ್ಜುನನು ಸಜ್ಜನನನ್ನು ಪ್ರತಿನಿಧಿಸುತ್ತಾನೆ. ಕೃಷ್ಣ ಅವನನ್ನು ಮೋಕ್ಷಪಥಕ್ಕೆ ಕರೆದೊಯ್ಯುವ ಮುಕ್ತಾತ್ಮ.

ಶ್ರೀಕೃಷ್ಣನನ್ನು ವರ್ಣಿಸುತ್ತ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ''ಶ್ರೀಕೃಷ್ಣನು ಒಂದು ಕೈಯಲ್ಲಿ ಲಗಾಮನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಕುದುರೆಗಳ ಹಗ್ಗವನ್ನು ಹಿಡಿದು, ಅರ್ಜುನನ

ಕಡೆಗೆ ಸ್ವಲ್ಪ ತಿರುಗಿ ನೋಡುತ್ತಿದ್ದಾನೆ. ಅವನ ಆ ಶಿಶುಸರಳ ಮುಖ ಭಾವವು ಅಲೌಕಿಕ ಪ್ರೇಮ ಮತ್ತು ಸಹಾನುಭೂತಿಯಿಂದ ದೀಪ್ತವಾಗಿದೆ.''

ಶ್ರೀಕೃಷ್ಣನ ಮುಖದಲ್ಲಿ ನಾವು ಶಿಶುಸಹಜ ಸರಳತೆಯನ್ನು ನೋಡುತ್ತೇವೆ. ಸಾಮಾನ್ಯವಾಗಿ ವ್ಯಕ್ತಿ ಬಾಲ್ಯದಿಂದ ಯೌವನಕ್ಕೆ ಕಾಲಿಟ್ಟಾಗ ಅವನ ಬಾಲ್ಯದ ಸರಳತೆ ಹೊರಟುಹೋಗುತ್ತದೆ. ಅದರ ಜಾಗವನ್ನು ಅರಿವು, ಪ್ರಬುದ್ಧತೆ ತುಂಬಿಕೊಳ್ಳುತ್ತದೆ. ಸಂತಪುರುಷನಲ್ಲಿ ಮಾತ್ರ ವಯಸ್ಸಾದ ಮೇಲೂ ಪ್ರಬುದ್ಧತೆಯೊಂದಿಗೆ ಸರಳತೆಯೂ ಮಿಳಿತವಾಗಿರುತ್ತದೆ. ಜ್ಞಾನಿ ಮತ್ತು ಪರಮಹಂಸರಿಬ್ಬರೂ ಬಾಲಕನಂತಿರುತ್ತಾರೆ. ಶ್ರೀಕೃಷ್ಣನೂ ಅಂತಹ ಜ್ಞಾನಿ – ಅವನು ಯಾದವ ರಾಜಕುಮಾರನಾಗಿಯೂ, ಯೋಧ ಮತ್ತು ಮುತ್ಸದ್ದಿಯಾಗಿಯೂ ವೃಂದಾವನದ ಮುಗ್ಧ ಗೋಪಬಾಲಕನೇ ಆಗಿದ್ದನು. ಅವನ ಆ ಸರಳತೆಯು ಯುದ್ಧಭೂಮಿಯಲ್ಲಿ ಅಂತಹ ಗಂಭೀರ ಸನ್ನಿವೇಶದಲ್ಲೂ ಎದ್ದು ಕಾಣುತ್ತಿದೆ. ರಣರಂಗದಲ್ಲಿ ಅರ್ಜುನ ಆಕಸ್ಮಿಕವಾಗಿ ಕಾರ್ಪಣ್ಯದೋಷದಿಂದ ಅಪಹೃತಚಿತ್ತನಾಗಿ ಯುದ್ಧವಿಮುಖನಾಗ ಹೊರಟ ವಿಷಮ ಸನ್ನಿವೇಶದಲ್ಲೂ ಅವನ ಮುಖದ ಮಂದಹಾಸ ಮರೆಯಲಾಗಲಿಲ್ಲ. ಅವನು 'ಪ್ರಹಸನ್ನಿವ'ನಾಗಿಯೇ ಇದ್ದನು ಎಂದು ಮಹಾಭಾರತಕಾರರು ಹೇಳುತ್ತಾರೆ.

ಶ್ರೀಕೃಷ್ಣನ ಮುಖದಲ್ಲಿ ಅಹೇತುಕ ಪ್ರೇಮ ಮತ್ತು ಸಹಾನುಭೂತಿ ಎದ್ದು ಕಾಣುತ್ತದೆ. ಒಬ್ಬ ಬಾಲಕ ಮಾತ್ರ ನಿಜವಾದ ಸಹಾನುಭೂತಿಯನ್ನು ತೋರಬಲ್ಲನು. ಅವನ ಸರಳ ಮನಸ್ಸಿನಲ್ಲಿ 'ಒಳಗೊಂದು ಹೊರಗೊಂದು' ಇರುವುದಿಲ್ಲ. ಪ್ರಾಪಂಚಿಕರ ಕೃತ್ರಿಮತೆ ಇರುವುದಿಲ್ಲ. ಬಾಲಕ ಬಹಳ ಸಂವೇದನಾಶೀಲನಾಗಿರುತ್ತಾನೆ. ಅವನು ತನ್ನ ಮಿತ್ರರು ಅಳುತ್ತಿದ್ದರೆ ತಾನೂ ಅಳುತ್ತಾನೆ, ಒಂದು ಅಳುವ ಮಗು ಆಟವಾಡುತ್ತಿರುವ ತನ್ನ ಮಿತ್ರರನ್ನು ನೋಡಿ ಅಳುವುದನ್ನು ನಿಲ್ಲಿಸುತ್ತಾನೆ. ಶ್ರೀಮಾತೆಯವರ ಜೀವನದಲ್ಲಿ ಒಂದು ಸುಂದರ ಉದಾಹರಣೆಯನ್ನು ನೋಡುತ್ತೇವೆ. ಜಯರಾಂಬಾಟಿಯಲ್ಲಿ ಒಬ್ಬ ಕೆಲಸದಾಳು ಶ್ರೀಮಾತೆಯವರಿಗೆ ಸಾಮಾನು ಇತ್ಯಾದಿಗಳನ್ನು ತಂದುಕೊಡುತ್ತಿದ್ದಳು. ಒಂದು ಸಲ ಬಹಳ ದಿನಗಳವರೆಗೆ ಅವಳು ಬರಲೇ ಇಲ್ಲ. ಕೊನೆಗೊಂದು ದಿನ ಅವಳು ಬಂದಳು. ಅವಳು ಬರುತ್ತಲೇ ಶ್ರೀಮಾತೆಯವರು ಅವಳು ಇಷ್ಟು ದಿನ ಯಾಕೆ ಬರಲಿಲ್ಲ ಎಂದು ವಿಚಾರಿಸಿಕೊಂಡರು. ಅವಳು ಕುಸಿದು ಕುಳಿತು ಒಂದೇ ಸಮನೆ ಅಳತೊಡಗಿದಳು. ಕೆಲ ದಿನಗಳ ಹಿಂದೆ ಅವಳ ಯುವಕ ಮಗ ತೀರಿಕೊಂಡ ವಿಷಯವನ್ನು ತಿಳಿಸಿದಳು. ಅದನ್ನು ಕೇಳಿದುದೇ ತಡ, ಶ್ರೀಮಾತೆ ಅಳತೊಡಗಿದರು. ಇಬ್ಬರೂ ಒಟ್ಟಿಗೆ ಬಹಳ ಅತ್ತರು. ಶ್ರೀಮಾತೆಯವರ ಈ ಸಹಜ, ಸರಳ ನಿಷ್ಕಪಟ ಭಾವನೆ ಮತ್ತು ಸಹಾನುಭೂತಿಯು ಆ ವೃದ್ಧೆಗೆ ಅದೆಷ್ಟು ಸಾಂತ್ವನವನ್ನು ನೀಡಿರಬಹುದೆಂದು ನಾವು ಊಹಿಸಬಹುದು. ಜನರ ದುಃಖಭಾರವನ್ನು ತಾವು ಅನುಭವಿಸಿ ಅವರ ಮನಸ್ಸನ್ನು ಹಗುರಗೊಳಿಸುವ ಈ ವಿಶೇಷ ಗುಣವನ್ನು ನಾವು ಶ್ರೀರಾಮಕೃಷ್ಣರಲ್ಲೂ ನೋಡುತ್ತೇವೆ.

ಶ್ರೀಕೃಷ್ಣನ ಮುಖದಲ್ಲಿ ನಾವು ಗಗನದಂತಹ ಗಾಂಭೀರ್ಯ ಮತ್ತು ಶಾಂತಿಯನ್ನು ನಾವು ನೋಡುತ್ತೇವೆ. ಶಾಂತಿಯನ್ನು ಮತ್ತು ಗಾಂಭೀರ್ಯವನ್ನು ನಾವು ಒಂದು ಮಗುವಿನಲ್ಲಿ ನೋಡಲು ಸಾಧ್ಯವಿಲ್ಲ. ಬಾಲಕ ಸ್ವಭಾವತಃ ಚಂಚಲನಾಗಿರುತ್ತಾನೆ. ಮಕ್ಕಳಿಗೆ ಸುಮ್ಮನೆ ಕುಳಿತುಕೊಳ್ಳುವುದು ಬಹಳ ಕಷ್ಟ ಕೂಡ. ಮಕ್ಕಳು ಸುಮ್ಮನೆ ಕುಳಿತರೂ ಮನಸ್ಸಿನಲ್ಲೇ ಸುಮ್ಮನೆ ಕುಳಿತ ಕೋತಿಗಳು ಬಾಳೆಯ ತೋಟಕ್ಕೆ ಲಗ್ಗೆ ಹಾಕುವ ಯೋಜನೆ ಹುಡುಕುತ್ತಿರುವಂತೆ – ಇನ್ನಾವುದೋ ತುಂಟ ತನಕ್ಕೆ ಹೊಂಚುಹಾಕುತ್ತಿರುತ್ತಾರೆ. ಮಕ್ಕಳಿಗೆ ಸುಮ್ಮನೆ ಕುಳಿತುಕೊಳ್ಳುವುದು ದೊಡ್ಡ ಶಿಕ್ಷೆ. ಆದರೆ ಜ್ಞಾನಿ ಹಾಗಲ್ಲ. ಅವನು ಸಾಗರದ ಅಲೆಗಳ ಹಾಗೆ ನಿರಂತರ ಕರ್ಮಶೀಲನಾಗಿದ್ದರೂ, ಅಂತರಂಗದಲ್ಲಿ ಸಮುದ್ರದ ಆಳ-ಗಾಂಭೀರ್ಯಗಳಿಂದ ತುಂಬಿಕೊಂಡಿರುತ್ತಾನೆ. ಸಮುದ್ರ ಎಷ್ಟು ಆಳವಾಗಿರುತ್ತದೆಯೋ ಅಷ್ಟು ಎತ್ತರೆತ್ತರದ ಅಲೆಗಳು ಏಳುತ್ತವೆ. ಜ್ಞಾನಿಯೂ ಹೊರಗಡೆ ನಿರಂತರ ಕರ್ಮಶೀಲನಾಗಿದ್ದರೂ ಅವನಲ್ಲಿ ಆಳವಾದ ಶಾಂತಿ ಮನೆಮಾಡಿರುತ್ತದೆ. ಸ್ವಾಮಿ ವಿವೇಕಾನಂದರ ಪ್ರಕಾರ ಇದು ಗೀತೆಯ ಒಂದು ಮುಖ್ಯ ಸಂದೇಶವೂ ಹೌದು.

ಕರ್ಮಣ್ಯಕರ್ಮಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥

'ಕರ್ಮ ಮಾಡುವಾಗ ಯಾರ ಮನಸ್ಸು ಶಾಂತವಾಗಿರುತ್ತದೆಯೋ, ಮತ್ತು ಯಾರಲ್ಲಿ ಬಾಹ್ಯ ಚಟುವಟಿಕೆಗಳು ಇರಲಿ ಅಥವಾ ಇಲ್ಲದಿರಲಿ ಬ್ರಹ್ಮ ಚಿಂತನೆಯೆಂಬ ಮಹಾನ್ ಕರ್ಮವು ನಿರಂತರ ನಡೆಯುತ್ತಿರುತ್ತದೆಯೋ ಅವನೇ ಮನುಷ್ಯರಲ್ಲಿ ಬುದ್ಧಿವಂತನು, ಯೋಗಿಯು ಮತ್ತು ಕರ್ಮರಹಸ್ಯವನ್ನು ಬಲ್ಲವನು.'

ಸಮುದ್ರವನ್ನು ನದಿಗಳು ನಿರಂತರವಾಗಿ ಸೇರುತ್ತಿದ್ದರೂ, ಅದು ತನ್ನ ಸೀಮೆಗಳನ್ನು ದಾಟದೆ 'ಅಚಲಂ ಪ್ರತಿಷ್ಠಂ' ಆಗಿರುತ್ತದೆ. ಆದರೆ ಶ್ರೀಕೃಷ್ಣನ ಕರುಣೆಯ ಸಾಗರವು ಸಮವಾಗಿದ್ದೂ, ತನ್ನ ಮೇರೆಗಳನ್ನು ದಾಟಿ ಭೋರ್ಗರೆಯುತ್ತಿದೆ. ಅವನಲ್ಲಿ ಆನಂದ ಮತ್ತು ಪ್ರೇಮದ ಸಮುದ್ರವು ಮೇರೆ ಮೀರಿ ಹರಿಯುತ್ತಿದೆ. ಅಲ್ಲಿ ಕಾಮನೆಗಳು ಮತ್ತು ವಿಷಯಾನುಭವಗಳೆಂಬ ಪ್ರವಾಹಗಳು ನದಿಗಳಂತೆ ಬಂದು ಅವನನ್ನು ಸೇರುತ್ತಿದ್ದರೂ ಅವನು ಸ್ವಲ್ಪವೂ ವಿಚಲಿತನಾಗುವುದಿಲ್ಲ. ಅವನ ಅಹುತೇಕ ಪ್ರೇಮದ ಪ್ರವಾಹವು ಶೋಕತಾಪ ಸಂತಪ್ತ ಜಗತ್ತಿಗೆ ಶಾಂತಿವಾರಿಯನ್ನು ವರ್ಷಿಸುತ್ತಿದೆ.

ಹೀಗೆ ಜ್ಞಾನಿಯ ಲಕ್ಷಣಗಳನ್ನು ವಿವರಿಸಲು ಇರುವ ಹೋಲಿಕೆಗಳೆಲ್ಲ ಅಪೂರ್ಣವಾದವುಗಳೇ ಎಂದು ನಾವು ಗಮನಿಸಬಹುದು. ಜ್ಞಾನಿ ಬಾಲಕನಂತೆ ಸರಳನಾಗಿರುತ್ತಾನೆ, ಆದರೆ ಚಂಚಲನಾಗಿರುವುದಿಲ್ಲ. ಅವನು ಸಮುದ್ರದಂತೆ ಶಾಂತನಾಗಿರುತ್ತಾನೆ, ಆದರೆ ಅವನ ಪ್ರೇಮದ ಪ್ರವಾಹಕ್ಕೆ ಸೀಮೆಗಳೇ ಇಲ್ಲ. ರಥಾರೂಢನಾದ ಪಾರ್ಥಸಾರಥಿ ಶ್ರೀಕೃಷ್ಣನ ಚಿತ್ರವು ಒಂದು ಪರಿಪೂರ್ಣ ಜೀವನಾದರ್ಶವನ್ನು ಪ್ರತಿನಿಧಿಸುತ್ತದೆ. ಅದು ಅರ್ಜುನನೆಂಬ ವಿಷಾದಗ್ರಸ್ತ ಜೀವಾತ್ಮನಿಗೆ ಧೈರ್ಯ-ಭರವಸೆಯ ಸಂದೇಶವೀಯುವಂತೆ, ಬ್ರಹ್ಮಜ್ಞಾನಾಪೇಕ್ಷಿಯಾದ ಜಿಜ್ಞಾಸುವಿಗೆ ಸಾಧನೆಯ ರಹಸ್ಯವನ್ನು ತಿಳಿಯಪಡಿಸುತ್ತದೆ. ಸಾಧಕನು ಸದಾ ತನ್ನ ಇಂದ್ರಿಯ, ಮನಗಳನ್ನು ಹತೋಟಿಯಲ್ಲಿಟ್ಟು, ಬುದ್ಧಿಯನ್ನು ಶುದ್ಧವಾಗಿಸಿಕೊಂಡು, ಭಗವತ್ಕೃಪೆಯಿಂದ ಮೋಕ್ಷವೆಂಬ ಗುರಿಯನ್ನು ಸಾಧಿಸಬೇಕು; ಇತರರಿಗೂ ಮೋಕ್ಷವನ್ನು ಪಡೆಯಲು ಸಹಾಯ ಮಾಡಬೇಕು ಎಂಬುದನ್ನು ಶ್ರೀಕೃಷ್ಣನ ರಥ ನೆನಪಿಸಿಕೊಡುತ್ತದೆ.